**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ**

**ಸಿ.ಸಿ ನಂಃ 731/2020**

**ಪಿರ್ಯಾದಿದಾರರು : ಕರ್ನಾಟಕ ಸರ್ಕಾರದ ಪರವಾಗಿ**

**ರಾಮನಗರ ಪೊಲೀಸ ಠಾಣೆ**

-ವಿರುದ್ಧ-

**ಆರೋಪಿತರು : ರಾಜರಾಮ ಮಾರುತಿ ನಾಯ್ಕ**

ವಯಸ್ಸುಃ 55 ವರ್ಷ, ವೃತ್ತಿಃ ಹೋಟೆಲ್ ವ್ಯಾಪಾರ,

ಸಾಃ ಅನಮೋಡ ತಾಲೂಕು, ಜೋಯಿಡಾ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ಸಿ.ಆರ್.ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ**

**ಪ್ರಃ 1:** ನೀವು ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿದ್ದೀರಾ?

**ಉತ್ತರಃ**

**ಪ್ರಃ 2: ಪ್ರಾ.ಸಾ-1 /ಚಾಸಾ-1: ಶ್ರೀ ಕಿರಣ ಬಿ ಪಾಟೀಲ** ಅವರು ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ದಿಃ 24-03-2020 ರಿಂದ ದೇಶ್ಯಾದ್ಯಾಂತ ಕರೋನ ನಿಮಿತ್ಯ ಲಾಕ್ ಡೌನ ಇರುವಾಗ ದಿಃ 12-04-2020 ರಂದು ಸಂಜೆ 4-00 ಗಂಟೆಗೆ ಸಾಕ್ಷಿಯು ಗಸ್ತಿನಲ್ಲಿರುವಾಗ ಆರೋಪಿತನಾದ ನೀನು ಆನಮೋಡದ ತಮ್ಮ ನಿವಾಸದಲ್ಲಿ ಅನಧೀಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ನಂತರ ಸಾಕ್ಷಿಯು ಮಾನ್ಯ ಡಿ.ವಾಯ್.ಎಸ್.ಪಿ ರವರಿಗೆ ಮಾಹಿತಿಯನ್ನು ತಿಳಿಸಿ, ನಂತರ ಚಾಸಾ-4 ರವರು 17 ಜನ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ರಾಮನಗರ ಠಾಣೆಗೆ 5-15 ಗಂಟೆಗೆ ಬಂದಿದ್ದು, ನಂತರ ಚಾಸಾ-12 ರವರ ಮೂಲಕ ಚಾಸಾ-2 ಮತ್ತು 3 ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ಮೂರು ಇಲಾಖಾ ವಾಹನಗಳಲ್ಲಿ ಆನಮೋಡಗೆ ಹೋಗಿ, ಆರೋಪಿತನಾದ ನಿಮ್ಮ ಮನೆಗೆ ಸಂಜೆ 6-20 ಕ್ಕೆ ತಲುಪಿದ್ದು, ನಂತರ ಆರೋಪಿತನಾದ ನಿನ್ನನ್ನು ವಿಚಾರಿಸಿದಾಗ ನಿನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಆರೋಪಿತನ ಮನೆಯ ಸುತ್ತ ಮುತ್ತ ಹುಡುಕಿದಾಗ, ಮನೆಯ ಹಿಂದೆ ಕಂಪೌಂಡನ ಒಳಗೆ ಕಸದ ರಾಶಿಯು ಇದ್ದು, ಅದರಲ್ಲಿ ಏನು ಇದೆ ಎಂದು ಆರೋಪಿತನಾದ ನಿನ್ನನ್ನು ವಿಚಾರರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿದ್ದು, ಆಗ ಅನುಮಾನಸ್ಪದವಾಗಿ ಸದ್ರಿ ರಾಶಿಯನ್ನು ಪರಿಶೀಲಿಸಿದಾಗ ಎಂಟು ಬಿಳಿಯ ಬಣ್ಣದ ರಟ್ಟಿನ

ಬಾಕ್ಸಗಳು ಇರುವುದು ಕಂಡು ಬಂದಿದ್ದು, ಸದ್ರಿ ರಟ್ಟಿನ ಬಾಕ್ಸಗಳಲ್ಲಿ ಏನಿದೇ ಎಂದು ವಿಚಾರಿಸಿದಾಗ ಆರೋಪಿತನಾದ ನೀನು ಭಯದಿಂದ ಗೋವಾ ರಾಜ್ಯದಲ್ಲಿ ತಯಾರಾದ ಸಾರಾಯಿಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿದ್ದು, ಸದ್ರಿ ಸಾರಾಯಿಯನ್ನು ಹೊಂದಲು ಯಾವುದೇ ಪಾಸ-ಯಾ-ಪರ್ಮಿಟ ಇರುವುದಿಲ್ಲ ಎಂದು, ಸದ್ರಿ ಮದ್ಯವನ್ನು ನಿನ್ನ ಮಾಲಿಕತ್ವದ ಓಮಿನಿ ವಾಹನ ಸಂಖ್ಯೆ ಜಿಎ-**01**-ಇ-**2397** ನೇದ್ದರಲ್ಲಿ ಗೋವಾ ರಾಜ್ಯದಿಂದ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 3: ಪ್ರಾ.ಸಾ.1** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನಂತರ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ತೆಗೆದು ನೋಡಿದಾಗ 6 ಬಾಕ್ಸಗಳಲ್ಲಿ ರಾಯಲ್ ಟ್ಯಾಗ್ಸನ 750 ಎ.ಎಲ್ ಒಟ್ಟು 61 ಬಾಟಲಿಗಳು, ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ 180 ಎಮ್.ಎಲ್‌ನ ಒಟ್ಟು 48 ಬಾಟಲಿಗಳು, ರಿಯಲ್ ವಿಸ್ಕಿಯ 750 ಎಮ್.ಎಲ್‌ನ ಒಟ್ಟು 09 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ ಮಾಡಿ ಸಾಕ್ಷಿಯವರ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಗಿದ್ದು, ನಂತರ ಆರೋಪಿತನಾದ ನೀನು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಿದಾಗ ಅದು ಸ್ಥಳದಲ್ಲಿಯೇ ಇದ್ದು, ಅದನ್ನು ಸಹ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡಿದ್ದು, ನಂತರ ರಾತ್ರಿ 06-40 ರಿಂದ 09-30 ರವರೆಗೆ ಪಂಚನಾಮೆಯನ್ನು ಜರುಗಿಸಿ, ನಂತರ ಆರೋಪಿತನನ್ನು ಹಾಗೂ ಮಧ್ಯವನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 4: ಪ್ರಾ.ಸಾ.1** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನಂತರ ಘಟನೆಯ ಬಗ್ಗೆ ಪೊಲೀಸ್ ಠಾಣೆಗೆ ಬಂದು ಚಾಸಾ-30 ರವರಿಗೆ ದೂರನ್ನು ನೀಡಿದ್ದು, ಹಾಗೂ ಮುಂದಿನ ತನಿಖೆಗಾಗಿ ಆರೋಪಿತನಾದ ನಿನ್ನನ್ನು ಹಾಗೂ ಮಧ್ಯವನ್ನು ಎಸ್.ಎಚ್.ಓ ರವರಿಗೆ ಹಸ್ತಾಂತರಿಸಿದ್ದು, ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು, ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು, ನ್ಯಾಯಾಲಯದ ಮುಂದಿರುವ ವಶಪಡಿಸಿಕೊಂಡ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಾದರಿ ಬಾಟಲಿಗಳನ್ನು

ಮು. ಮಾ-1 ಎಂದು, ಸಾಕ್ಷಿಯ ಸಹಿಯನ್ನು ಮು. ಮಾ 1(ಎ) ಎಂದು ಗುರುತಿಸಿದ್ದು, ಹಾಗೂ ವಶಪಡಿಸಿಕೊಂಡ ಓಮಿನಿ ವಾಹನವನ್ನು ಮತ್ತು ಆ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 5: ಪ್ರಾ.ಸಾ-2/ಚಾಸಾ-2: ರಾಮ ಪಾಂಡುರಂಗ ನಾಯ್ಕ** ಅವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-3 ರವರ ಪರಿಚಯ ಇದ್ದು, ದಿಃ 12-04-2020 ರಂದು ಸಾಕ್ಷಿಯವರನ್ನು ಹಾಗೂ ಚಾಸಾ-3 ರವರನ್ನು ಪೊಲೀಸರು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ಸಾಕ್ಷಿಯವರು, ಚಾಸಾ-3, 4 ಮತ್ತು ಪೊಲೀಸ ಸಿಬ್ಬಂದಿಗಳು ಸೇರಿ ಇಲಾಖಾ ವಾಹನದಲ್ಲಿ ಆನಮೋಡಗೆ ಹೊರಟು ಆರೋಪಿತನಾದ ನಿಮ್ಮ ಮನೆಗೆ ಸಂಜೆ 6-20 ಕ್ಕೆ ತಲುಪಿ, ನಂತರ ಪೊಲೀಸರು ಆರೋಪಿತನಾದ ನಿನ್ನನ್ನು ವಿಚಾರಿಸಿದಾಗ ಆರೋಪಿತನಾದ ನೀನು ನಿನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ಆರೋಪಿತನಾದ ನಿನ್ನನ್ನು ಪ್ರಶ್ನಿಸಿದಾಗ ಸಂಪರ್ಕ ಉತ್ತರ ಇಲ್ಲದೇ ಇರುವ ಕಾರಣ, ಮನೆಯ ಸುತ್ತ ಮುತ್ತ ಹುಡುಕಿದಾಗ, ಆರೋಪಿತನ ಮನೆಯ ಹಿಂದೆ ಕಂಪೌಂಡನ ಒಳಗೆ ಹುಡುಕಿದಾಗ, ಕಸದ ರಾಶಿಯು ಇದ್ದು, ಅದರಲ್ಲಿ ಏನಿದೆ ಎಂದು ವಿಚಾರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿದ್ದು, ಆಗ ಪೊಲೀಸರಿಗೆ ಅನುಮಾನಸ್ಪದವಾಗಿ ಸದ್ರಿ ರಾಶಿಯನ್ನು ಪರಿಶೀಲಿಸಿದಾಗ ಎಂಟು ಬಿಳಿಯ ಬಣ್ಣದ ರಟ್ಟಿನ ಬಾಕ್ಸಗಳು ಇರುವುದು ಕಂಡು ಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 6: ಪ್ರಾ.ಸಾ.2** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನಂತರ ರಟ್ಟಿನ ಬಾಕ್ಸಗಳನ್ನು ತಮ್ಮ ಸಮಕ್ಷಮ ತೆಗೆದು ನೋಡಿದಾಗ ರಾಯಲ್ ಟ್ಯಾಗ್ಸನ ಮತ್ತು ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ ಇರುವುದು ಕಂಡು ಬಂದಿದ್ದು, ಒಂದು ಬಾಕ್ಸನಲ್ಲಿ ಕೇವಲ ಒಂದು ರಾಯಲ್ ಟ್ಯಾಗ್ಸ ಇರುತ್ತದೆ. ನಂತರ ಸಾಕ್ಷಿಯವರ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಅವರ ಸಹಿವುಳ್ಳ ಚೀಟಿಯನ್ನು ಅಂಟಿಸಿದ್ದು, ನಂತರ ಆರೋಪಿತನಾದ ನೀನು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಿದಾಗ ಅದು ಸ್ಥಳದಲ್ಲಿಯೇ ಇದ್ದು, ಅದನ್ನು ಸಹ ತಮ್ಮ ಸಮಕ್ಷಮ ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದು, ನಂತರ ರಾತ್ರಿ **06-40** ರಿಂದ **09-30** ರವರೆಗೆ ಪಂಚನಾಮೆಯನ್ನು ಜರುಗಿಸಿ, ಆರೋಪಿತನನ್ನು ಹಾಗೂ ಮಧ್ಯವನ್ನು ವಶಪಡಿಸಿಕೊಂಡಿದ್ದು, ಸದ್ರಿ ಮದ್ಯವನ್ನು ಆರೋಪಿತನಾದ

ನೀನು ಗೋವಾದಿಂದ ನಿನ್ನ ವಾಹನ ಸಂಖ್ಯೆ ಜಿಎ-**01**-ಇ-**2397** ನೇದ್ದರಲ್ಲಿ ತಂದಿರುವುದಾಗಿ ತಿಳಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 7: ಪ್ರಾ.ಸಾ.2** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಬಿ ಎಂದು, ವಶಪಡಿಸಿಕೊಂಡ ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಾದರಿ ಬಾಟಲಿಗಳನ್ನು ಮು.ಮಾ-1 ಎಂದು, ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ಮು. ಮಾ 1(ಬಿ) ಎಂದು, ವಶಪಡಿಸಿಕೊಂಡ ಓಮಿನಿ ವಾಹನವನ್ನು ಮತ್ತು ಆರೋಪಿತನಾದ ನಿನ್ನನ್ನು ನೋಡಿ ಗುರುತಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 8: ಪ್ರಾ.ಸಾ-4/ಚಾಸಾ-5: ಪ್ರಭು ರಾಮಚಂದ್ರ ಗಂಗನಳ್ಳಿ** ಅವರು ತಮ್ಮ ಸಾಕ್ಷ್ಯದಲ್ಲಿ ದಿಃ 12-04-2020 ರಂದು ಸಂಜೆ 4-00 ಗಂಟೆಗೆ ಸಾಕ್ಷಿಯವರು ಕವೇರಿಯಲ್ಲಿರುವಾಗ ಚಾಸಾ-4 ರವರು ತನಗೆ ಕರೆ ಮಾಡಿ ಅಬಕಾರಿ ದಾಳಿಯ ಬಗ್ಗೆ ಮಾಹಿತಿಯನ್ನು ತಿಳಿಸಿ, ಅವರೊಂದಿಗೆ ಮತ್ತು ತಮ್ಮ ಸಿಬ್ಬದಿಗಳೊಂದಿಗೆ ಸಹಕರಿಸುವಂತೆ ತಿಳಿಸಿದ ಮೇರೆಗೆ 17 ಜನ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ರಾಮನಗರ ಠಾಣೆಗೆ 5-15 ಗಂಟೆಗೆ ಹೋಗಿದ್ದು, ನಂತರ ಚಾಸಾ-12 ರವರ ಮೂಲಕ ಚಾಸಾ-2 ಮತ್ತು 3 ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ಮೂರು ಇಲಾಖಾ ವಾಹನಗಳಲ್ಲಿ ಆನಮೋಡಗೆ ಹೊರಟು ಆರೋಪಿತನ ಮನೆಗೆ ಸಂಜೆ 6-20 ಕ್ಕೆ ತಲುಪಿದ್ದು, ನಂತರ ಆರೋಪಿಯನ್ನು ವಿಚಾರಿಸಿದಾಗ ಆರೋಪಿತನಾದ ನೀನು ನಿನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ನಂತರ ಆರೋಪಿತನನ್ನು ಪ್ರಶ್ನಿಸಿದಾಗ ಸಂಪರ್ಕ ಉತ್ತರ ಇಲ್ಲದೇ ಇರುವ ಕಾರಣ, ಪಂಚರ ಸಮಕ್ಷಮ ಆರೋಪಿತನ ಮನೆಯ ಸುತ್ತ ಮುತ್ತ ಹುಡುಕಿದಾಗ, ಮನೆಯ ಹಿಂದೆ ಕಂಪೌಂಡನ ಒಳಗೆ ಹುಡುಕಿದಾಗ, ಕಸದ ರಾಶಿಯು ಇದ್ದು, ಅದರಲ್ಲಿ ಏನು ಇದೆ ಎಂದು ವಿಚಾರರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿರುತ್ತಾರೆ. ಆಗ ಅನುಮಾನಸ್ಪದವಾಗಿ ಸದ್ರಿ ರಾಶಿಯನ್ನು ಪರಿಶೀಲಿಸಿದಾಗ, ಎಂಟು ಬಿಳಿಯ ಬಣ್ಣದ ರಟ್ಟಿನ ಬಾಕ್ಸಗಳು ಇರುವುದು ಕಂಡು ಬಂದಿದ್ದು, ಸದ್ರಿ ರಟ್ಟಿನ ಬಾಕ್ಸಗಳಲ್ಲಿ ಏನಿದೇ ಎಂದು ವಿಚಾರಿಸಿದಾಗ ಆರೋಪಿತನು ಭಯದಿಂದ ಗೋವಾ ರಾಜ್ಯದಲ್ಲಿ ತಯಾರಾದ ಸಾರಾಯಿಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿದ್ದು, ಸದ್ರಿ ಸಾರಾಯಿಯನ್ನು ಹೊಂದಲು ಯಾವುದೇ ಪಾಸ-ಯಾ-ಪರ್ಮಿಟ ಇರುವುದಿಲ್ಲ ಎಂದು, ಸದ್ರಿ ಮದ್ಯವನ್ನು ತನ್ನ ಮಾಲಿಕತ್ವದ ಓಮಿನಿ ವಾಹನ ಸಂಖ್ಯೆ ಜಿಎ-**01**-

ಇ-**2397** ನೇದ್ದರಲ್ಲಿ ಗೋವಾ ರಾಜ್ಯದಿಂದ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 9: ಪ್ರಾ.ಸಾ.4** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನಂತರ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ತೆಗೆದು ನೋಡಿದಾಗ 6 ಬಾಕ್ಸಗಳಲ್ಲಿ ರಾಯಲ್ ಟ್ಯಾಗ್ಸನ 750 ಎ.ಎಲ್ ಒಟ್ಟು 61 ಬಾಟಲಿಗಳು, ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ 180 ಎಮ್.ಎಲ್‌ನ ಒಟ್ಟು 48 ಬಾಟಲಿಗಳು, ರಿಯಲ್ ವಿಸ್ಕಿಯ 750 ಎಮ್.ಎಲ್‌ನ ಒಟ್ಟು 09 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಸಾಕ್ಷಿಯ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿದ್ದು, ನಂತರ ಆರೋಪಿತನಾದ ನೀನು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಿದಾಗ, ಅದು ಸ್ಥಳದಲ್ಲಿಯೇ ಇದ್ದು, ಅದನ್ನು ಸಹ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡಿದ್ದು, ನಂತರ ರಾತ್ರಿ 06-40 ರಿಂದ 09-30 ರವರೆಗೆ ಪಂಚನಾಮೆಯನ್ನು ಜರುಗಿಸಿ, ನಂತರ ಆರೋಪಿತನನ್ನು ಹಾಗೂ ಮಧ್ಯವನ್ನು ಸಾಕ್ಷಿಯ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದು, ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 10: ಪ್ರಾ.ಸಾ-3/ಚಾಸಾ-4: ಪಿ ಮೋಹನ ಪ್ರಸಾದ** ಅವರು ತಮ್ಮ ಸಾಕ್ಷ್ಯದಲ್ಲಿ ದಿಃ 24-03-2020 ರಿಂದ ದೇಶ್ಯಾದ್ಯಾಂತ ಕರೋನ ನಿಮಿತ್ಯ ಲಾಕ್ ಡೌನ ಇರುವಾಗ ದಿಃ 12-04-2020 ರಂದು ಸಂಜೆ 4-00 ಗಂಟೆಗೆ ಚಾಸಾ-1 ರವರು ಗಸ್ತಿನಲ್ಲಿರುವಾಗ ಚಾಸಾ-11 ರವರು ಆರೋಪಿಯು ಆನಮೋಡದ ತಮ್ಮ ನಿವಾಸದಲ್ಲಿ ಅನಧೀಕೃತವಾಗಿ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ತಿಳಿಸಿದ ಬಗ್ಗೆ ಸಾಕ್ಷಿಗೆ ಮಾಹಿತಿಯನ್ನು ತಿಳಿಸಿದ್ದು, ನಂತರ ಸಾಕ್ಷಿಯವರು 17 ಜನ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ರಾಮನಗರ ಠಾಣೆಗೆ 5-15 ಗಂಟೆಗೆ ಬಂದಿರುತ್ತೇನೆ ಎಂದು, ನಂತರ ಚಾಸಾ-12 ರವರ ಮೂಲಕ ಚಾಸಾ 2 ಮತ್ತು 3 ಇಬ್ಬರು ಪಂಚರನ್ನು ಠಾಣೆಗೆ ಬರಮಾಡಿಕೊಂಡು ಪ್ರಕರಣದ ಮಾಹಿತಿಯನ್ನು ತಿಳಿಸಿ, ಪಂಚರಾಗಲು ಕೋರಿ ಅವರು ಒಪ್ಪಿದ ಮೇರೆಗೆ, ಸಂಜೆ 5-30 ಗಂಟೆಗೆ ಮೂರು ಇಲಾಖಾ ವಾಹನಗಳಲ್ಲಿ ಆನಮೋಡಗೆ

ಹೊರಟು, ಆರೋಪಿಯ ಮನೆಗೆ ಸಂಜೆ 6-20 ಕ್ಕೆ ತಲುಪಿದ್ದು, ನಂತರ ಆರೋಪಿಯನ್ನು ವಿಚಾರಿಸಿದಾಗ ಆರೋಪಿತನು ತನ್ನ ಹೆಸರು ಮತ್ತು ವಿಳಾಸವನ್ನು ತಿಳಿಸಿದ್ದು, ಆರೋಪಿತನಾದ ನಿನ್ನನ್ನು ಪ್ರಶ್ನಿಸಿದಾಗ ಸಂಪರ್ಕ ಉತ್ತರ ಇಲ್ಲದೇ ಇರುವ ಕಾರಣ, ಪಂಚರ ಸಮಕ್ಷಮ ಆರೋಪಿತನ ಮನೆಯ ಸುತ್ತ ಮುತ್ತ ಹುಡುಕಿದಾಗ, ಮನೆಯ ಹಿಂದೆ ಕಂಪೌಂಡನ ಒಳಗೆ ಹುಡುಕಿದಾಗ, ಕಸದ ರಾಶಿಯು ಇದ್ದು, ಅದರಲ್ಲಿ ಏನಿದೆ ಎಂದು ವಿಚಾರರಿಸಿದಾಗ ಕಸ ಇರುತ್ತದೆ ಎಂದು ತಿಳಿಸಿದ್ದು, ಆಗ ಅನುಮಾನಸ್ಪದವಾಗಿ ಸದ್ರಿ ರಾಶಿಯನ್ನು ಪರಿಶೀಲಿಸಿದಾಗ ಎಂಟು ಬಿಳಿಯ ಬಣ್ಣದ ರಟ್ಟಿನ ಬಾಕ್ಸಗಳು ಇರುವುದು ಕಂಡು ಬಂದಿರುತ್ತದೆ ಎಂದು, ಸದ್ರಿ ರಟ್ಟಿನ ಬಾಕ್ಸಗಳಲ್ಲಿ ಏನಿದೇ ಎಂದು ವಿಚಾರಿಸಿದಾಗ ಆರೋಪಿತನು ಭಯದಿಂದ ಗೋವಾ ರಾಜ್ಯದಲ್ಲಿ ತಯಾರಾದ ಸಾರಾಯಿಗಳನ್ನು ಮಾರಾಟ ಮಾಡುವ ಉದ್ದೇಶದಿಂದ ತಂದಿರುವುದಾಗಿ ತಿಳಿಸಿದ್ದು, ಸದ್ರಿ ಸಾರಾಯಿಯನ್ನು ಹೊಂದಲು ಯಾವುದೇ ಪಾಸ- ಯಾ- ಪರ್ಮಿಟ ಇರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು, ಸದ್ರಿ ಮದ್ಯವನ್ನು ಆರೋಪಿತನ ಮಾಲಿಕತ್ವದ ಓಮಿನಿ ವಾಹನ ಸಂಖ್ಯೆ ಜಿಎ-**01**-ಇ **-2397** ನೇದ್ದರಲ್ಲಿ ಗೋವಾ ರಾಜ್ಯದಿಂದ ಸಾಗಾಟ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 11: ಪ್ರಾ.ಸಾ.3** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನಂತರ ರಟ್ಟಿನ ಬಾಕ್ಸಗಳನ್ನು ಪಂಚರ ಸಮಕ್ಷಮ ತೆಗೆದು ನೋಡಿದಾಗ 6 ಬಾಕ್ಸಗಳಲ್ಲಿ ರಾಯಲ್ ಟ್ಯಾಗ್ಸನ 750 ಎ.ಎಲ್ ಒಟ್ಟು 61 ಬಾಟಲಿಗಳು, ಓಲ್ಡ ಬಿಲ್ಲ ಸ್ಪೇಷಲ್ ವಿಸ್ಕಿಯ 180 ಎಮ್.ಎಲ್‌ನ ಒಟ್ಟು 48 ಬಾಟಲಿಗಳು, ರಿಯಲ್ ವಿಸ್ಕಿಯ 750 ಎಮ್.ಎಲ್‌ನ ಒಟ್ಟು 09 ಬಾಟಲಿಗಳು ಇರುವುದು ಕಂಡು ಬಂದಿರುತ್ತದೆ. ನಂತರ ಪಂಚರ ಸಮಕ್ಷಮ ಪ್ರತಿಯೊಂದು ಬಾಕ್ಸನಿಂದ ತಲಾ ಎರಡು ಬಾಟಲಿಗಳು ಹಾಗೂ ಒಂದು ಬಾಟಲಿ ಇದ್ದ ಬಾಕ್ಸನಿಂದ ಒಂದು ಬಾಟಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯನ್ನು ತೆಗೆದು, ಹಾಗೂ ಅವುಗಳನ್ನು ಬಿಳಿ ಬಟ್ಟೆಗಳಲ್ಲಿ ಸುತ್ತಿ ಸೀಲ್ ಮಾಡಿ ಸಾಕ್ಷಿಯ ಹಾಗೂ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿದ್ದು, ನಂತರ ಆರೋಪಿತನಾದ ನೀನು ಕೃತ್ಯಕ್ಕೆ ಉಪಯೋಗಿಸಿದ ವಾಹನವನ್ನು ಕೇಳಿದಾಗ, ಅದು ಸ್ಥಳದಲ್ಲಿಯೇ ಇದ್ದು, ಅದನ್ನು ಸಹ ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡಿದ್ದು, ನಂತರ ರಾತ್ರಿ 06-40 ರಿಂದ 09-30 ರವರೆಗೆ ಪಂಚನಾಮೆಯನ್ನು ಜರುಗಿಸಿ, ನಂತರ ಆರೋಪಿತನನ್ನು ಹಾಗೂ ಮಧ್ಯವನ್ನು ಸಾಕ್ಷಿಯ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದು, ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 12: ಪ್ರಾ.ಸಾ-5/ಚಾಸಾ-13: ಮಂಜುನಾಥ ಹೊನ್ನಪ್ಪ ಶೆಟ್ಟಿ** ಅವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 12-04-2020 ರಂದು ಮಧ್ಯಾಹ್ನ 04-15 ಗಂಟೆಗೆ ಸಾಕ್ಷಿಯವರ ಮೇಲಾಧಿಕಾರಿಯಾದ ಚಾಸಾ-5 ರವರು ಸಾಕ್ಷಿಯವರನ್ನು ಹಾಗೂ ಚಾಸಾ-28 ರವರನ್ನು ಕರೆದು ರೆಡ್ ಮಾಡಲು ತಮಗೆ ಚಾಸಾ-4 ರವರು ಅವರ ಕಚೇರಿಗೆ ಬರಲು ಹೇಳಿದ್ದಾರೆ ಎಂದು ತಿಳಿಸಿ, ಅವರನ್ನು ಕರೆದುಕೊಂಡು ಚಾಸಾ-4 ರವರ ಕಚೇರಿಗೆ ಹೋಗಿದ್ದು, ಅಲ್ಲಿ ಹಳಿಯಾಳ ಪೊಲೀಸ್ ಠಾಣೆಯ ಪಿ.ಎಸ್.ಐ. ಚಾಸಾ-7 ರವರು ತಮ್ಮ ಸಿಬ್ಬಂದಿಯೊಂದಿಗೆ ಹಾಗೂ ದಾಂಡೇಲಿ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ. ಆದ ಚಾಸಾ-8 ರವರು ತಮ್ಮ ಸಿಬ್ಬಂದಿಯೊಂದಿಗೆ ಅದೇ ಕಚೇರಿಯಲ್ಲಿದ್ದು, ನಂತರ ಚಾಸಾ-4 ರವರು ತಮ್ಮನ್ನೆಲ್ಲಾ ಕರೆದುಕೊಂಡು ರಾಮನಗರ ಪೊಲೀಸ್ ಠಾಣೆಗೆ ಹೋಗಿ, ನಂತರ ಚಾಸಾ-4 ರವರು ತಮ್ಮ ಸಿಬ್ಬಂದಿಯ ಮೂಲಕ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆಯಿಸಿ, ಅವರನೆಲ್ಲರನ್ನು ಕುರಿತು ರಾಮನಗರದ ಅನಮೋಡ ಹತ್ತಿರ ಆರೋಪಿತನಾದ ನೀನು ಅನಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಸಾಕ್ಷಿಯು ಅವರನ್ನೆಲ್ಲಾ ಕರೆದುಕೊಂಡು ಮಾಹಿತಿ ಬಂದ ಪ್ರಕಾರ ಘಟನಾ ಸ್ಥಳಕ್ಕೆ ತಲುಪಿದ್ದು, ಅಲ್ಲಿ ಚಾಸಾ-4 ರವರು ಕೆಲವು ಸಿಬ್ಬಂದಿಗಳನ್ನು ಆರೋಪಿತನ ಮನೆಯ ಸುತ್ತಮುತ್ತ ನಿಲ್ಲಿಸಿದರು ಮತ್ತು ಚಾಸಾ-1, ಚಾಸಾ-5 ಮತ್ತು ಸಾಕ್ಷಿಯವರನ್ನು ಹಾಗೂ ಇನ್ನೀತರ ಸಿಬ್ಬಂದಿಗಳನ್ನು ಕರೆದುಕೊಂಡು ಆರೋಪಿತನ ಮನೆಯ ಒಳಗೆ ಹೋಗಿದ್ದು, ಸದರಿ ಮನೆಯಲ್ಲಿದ್ದ ಆರೋಪಿತನಾದ ನಿನ್ನ ಹೆಸರು ರಾಜಾರಾಮ ನಾಯ್ಕ ಎಂದು ಹೇಳಿದ್ದು, ಆದರೆ ಚಾಸಾ-4 ರವರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಿಸಲು ತಡವರಿಸಿದ್ದರಿಂದ ಚಾಸಾ-4 ರವರು ಸದರಿ ಮನೆಯನ್ನು ಮತ್ತು ಸುತ್ತಮುತ್ತಲಿನ ಸ್ಥಳವನ್ನು ಪರೀಕ್ಷಿಸಲು ಆದೇಶಿಸಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 13: ಪ್ರಾ.ಸಾ.5** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ಸದರಿ ಆದೇಶದಂತೆ ಪರಿಶೀಲನೆ ಮಾಡಿದಾಗ ಆರೋಪಿತನ ಮನೆಯ ಹಿಂದಿನ ಕಂಪೌಂಡ ಹತ್ತಿರ ಗಿಡ-ಗಂಟೆಗಳ ನಡುವೆ ತಪ್ಪಲುಗಳಿಂದ ಮುಚ್ಚಿದ ವಸ್ತುಗಳು ಕಂಡು ಬಂದಿದ್ದು, ಅದನ್ನು ತೆಗೆದು ಪರಿಶೀಲನೆ ಮಾಡಿದಾಗ, ಅದರಲ್ಲಿ 8 ರಟ್ಟಿನ ಬಾಕ್ಸ್ ಗಳು ಇರುವುದು ಕಂಡು ಬಂದಿದ್ದು, ಸದರಿ 8 ರಟ್ಟಿನ ಬಾಕ್ಸ್ ಗಳ ಬಗ್ಗೆ ವಿಚಾರಿಸಿದಾಗ ಸದರಿ ಬಾಕ್ಸ್ ಗಳು ಇರುವುದು ಕಂಡು ಬಂದಿದ್ದು, ಸದರಿ 8 ರಟ್ಟಿನ ಬಾಕ್ಸ್ ಗಳ ಬಗ್ಗೆ ವಿಚಾರಿಸಿದಾಗ ಸದರಿ ಬಾಕ್ಸ್ ಗಳಲ್ಲಿ ಗೋವಾ ಸರಾಯಿ ಇದ್ದು, ಅದನ್ನು ಹೆಚ್ಚಿನ ಲಾಭಕ್ಕಾಗಿ ಮಾರಾಟ ಮಾಡುತ್ತಿರುವುದಾಗಿ ಹೇಳಿದ್ದು, ನಂತರ ಸದರಿ ರಟ್ಟಿನ ಬಾಕ್ಸ್ ಗಳನ್ನು ತೆರೆಲಾಗಿದ್ದು, ಮೊದಲನೇ ಬಾಕ್ಸನಲ್ಲಿ 750 ಎಂ.ಎಲ್.ನ ರಿಯಲ್ ವಿಸ್ಕಿಯ 9 ಬಾಟಲಿಗಳು, 2

ರಿಂದ 6 ನೇ ಬಾಕ್ಸಗಳಲ್ಲಿ 750 ಎಂ.ಎಲ್.ನ ರಾಯಲ್ ಸ್ಟ್ರಾಂಗ್ ವಿಸ್ಕಿಯ ತಲಾ 12 ಬಾಟಲಿಗಳು, 7 ನೇ ಬಾಕ್ಸನಲ್ಲಿ 750 ಎಂ.ಎಲ್.ನ ರಾಯಲ್ ಸ್ಟ್ರಾಂಗ್ ವಿಸ್ಕಿಯ 1 ಬಾಟಲಿ ಇದ್ದು, ಕೊನೆಯ ಬಾಕ್ಸನಲ್ಲಿ 180 ಎಂ.ಎಲ್.ನ ಓಲ್ಡ್ ಬಿಲ್ ವಿಸ್ಕಿಯ ತಲಾ 48 ಬಾಟಲಿಗಳು ಇದ್ದವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 14: ಪ್ರಾ.ಸಾ.5** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ಚಾಸಾ-1 ಮತ್ತು ಚಾಸಾ-4 ರವರ ಆದೇಶದಂತೆ ಪಂಚನಾಮೆ ಜರುಗಿಸಿ, ಎಲ್ಲಾ ಅಕ್ರಮ ಮದ್ಯವನ್ನು ಜಪ್ತು ಮಾಡಿ, ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಬಾಕ್ಸನಿಂದ ತಲಾ 2 ಬಾಟಲಿಗಳನ್ನು ಮತ್ತು ಕೇವಲ ಒಂದೇ ಇದ್ದ ಬಾಟಲಿಯನ್ನು ಪ್ರತ್ಯೇಕವಾಗಿ ತೆಗೆದು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದ್ದು, ನಂತರ ಸದರಿ ಅಕ್ರಮ ಮದ್ಯವನ್ನು ಗೋವಾದಿಂದ ತರಲು ಬಳಸಿದ ವಾಹನವನ್ನು ತೋರಿಸಿದ್ದು, ಅದರ ನಂ.ಜಿಎ-01/ಇ-2397 ಓಮಿನಿ ವಾಹನವನ್ನು ಸಹ ಅದೇ ಸಮಯದಲ್ಲಿ ಜಪ್ತುಪಡಿಸಿಕೊಂಡಿದ್ದು, ನಂತರ ಚಾಸಾ-1 ರವರು ಸರಕಾರದ ವತಿಯಿಂದ ದೂರನ್ನು ನೀಡಿರುತ್ತಾರೆ ಮತ್ತು ಆರೋಪಿತನಾದ ನಿನ್ನ ವಿರುದ್ಧ ಕ್ರಮ ಕೈಗೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ 750 ಎಂ.ಎಲ್.ನ 13 ಬಾಟಲಿಗಳು ಹಾಗೂ 180 ಎಂ.ಎಲ್.ನ 2 ಬಾಟಲಿಗಳನ್ನು ನೋಡಿ ಗುರುತಿಸಿದ್ದು ಹಾಗೂ ಆರೋಪಿತನನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 15: ಪ್ರಾ.ಸಾ-6/ಚಾಸಾ-31: ಮಂಜುಳಾ ಸೋಮಪ್ಪ ರಾವೋಜಿ** ಅವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 12-04-2020 ರಂದು ರಾತ್ರಿ 10-30 ಗಂಟೆಗೆ ಸಾಕ್ಷಿಯವರು ಠಾಣಾ ಪ್ರಭಾರದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದು, ಠಾಣಾ ಗುನ್ಹಾ ನಂ.21/2020 ರಂತೆ ಪ್ರಕರಣವನ್ನು ದಾಖಲಿಸಿ, ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಸಾಕ್ಷಿಯ ಮೇಲಾಧಿಕಾರಿಗಳಿಗೆ ಸಲ್ಲಿಸಿದ್ದು, ಅದೇ ಸಮಯದಲ್ಲಿ ಪಂಚನಾಮೆಯನ್ನು ಮತ್ತು ಜಪ್ತುಪಡಿಸಿಕೊಂಡ ಅಕ್ರಮ ಮದ್ಯವನ್ನು ಮತ್ತು ಒಂದು ವಾಹನವನ್ನು ಹಾಗೂ ಆರೋಪಿತನಾದ ನಿನ್ನನ್ನು ಹಾಜರುಪಡಿಸಿದ್ದು, ಅಕ್ರಮ ಮದ್ಯದ ಬಗ್ಗೆ ಮಾಲು ಪಟ್ಟಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡು, ಆರೋಪಿತನಾದ ನಿನ್ನ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ನಿನ್ನ ಸ್ವ-ಖುಷಿ ಹೇಳಿಕೆಯನ್ನು ಪಡೆದು, ನಿನ್ನನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ ಎಂದು, ದಿನಾಂಕ 10-06-2020 ರಂದು ರಾಸಾಯನಿಕ ಪರೀಕ್ಷೆಗೆ ತೆಗೆದಿಟ್ಟ ವಸ್ತುಗಳನ್ನು ತಮ್ಮ ಸಿಬ್ಬಂದಿಯ ಮೂಲಕ ಎಫ್.ಎಸ್.ಎಲ್. ಗೆ ಕಳುಹಿಸಿದ್ದು, ದಿನಾಂಕ 26-08-2020 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಪಡೆದುಕೊಂಡು, ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತನಾದ ನಿನ್ನ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಕಂಡು ಬಂದ ಕಾರಣ, ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಶ್ನೆಃ 16: ಪ್ರಾ.ಸಾ.6** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನ್ಯಾಯಾಲಯದ ಮುಂದಿರುವ 750 ಎಂ.ಎಲ್.ನ 13 ಬಾಟಲಿಗಳು ಹಾಗೂ 180 ಎಂ.ಎಲ್.ನ 2 ಬಾಟಲಿಗಳನ್ನು ನೋಡಿ ಗುರುತಿಸಿ, ಅವುಗಳನ್ನು ಮು.ಮಾ-1 ಎಂದು, ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2 ಎ ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು, ಆದೇಶ ಪ್ರತಿಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು 4 ಎ ಎಂದು, ಪೊಲೀಸ್ ಉಪನಿರೀಕ್ಷಕರಿಗೆ ನೀಡಿದ ಸ್ವೀಕೃತಿ ಪತ್ರವನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು, ಎಫ್.ಎಸ್.ಎಲ್. ವರದಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6 ಎ ಎಂದು ಗುರುತಿಸಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

**ಉತ್ತರಃ**

**ಪ್ರಃ 17:** ನಿಮಗೆ ಇನ್ನೇನಾದರೂ ಹೇಳುವುದು ಇದೆಯೇ?

**ಉತ್ತರಃ**

**ಪ್ರಃ 18:** ನಿಮ್ಮ ಪರವಾಗಿ ಯಾರನ್ನಾದರೂ ಸಾಕ್ಷಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಅವರ ಭಾಷೆಯಲ್ಲಿ ಓದಿ ಹೇಳಿ, ಆರೋಪಿ ನೀಡಿರುವ ಉತ್ತರವನ್ನು ಯಥಾವತ್ತಾಗಿ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಂಡಿರುತ್ತೇನೆ ಮತ್ತು ಅದು ಸರಿ ಇರುತ್ತದೆ ಅಂತಾ ಈ ಮೂಲಕ ದೃಡಿಕರಿಸಿರುತ್ತೇನೆ.)

**ದಾಂಡೇಲಿ** **Sd/-**

**ದಿನಾಂಕಃ 13-10-2025** **ಪ್ರ.ದ.ದಂ.ನ್ಯಾಯಾಲಯ, ದಾಂಡೇಲಿ**